<u>ದಿನಾಂಕ 17-07-2019 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>: ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ :</u>

ನಾನು ಸಣ್ಣವ್ವ ಮಡ್ಲಿಕರ ಎನ್ನುವವರ ವಿರುದ್ಧ ದಾವಾ ಸಲ್ಲಿಸಿದ್ದೇವೆ. ಅವರು ದಾವಾ ಆಸ್ತಿಯ ಸ್ವಾಧೀನಕ್ಕೆ ತೊಂದರೆ ಕೊಟ್ಟಿದ್ದರಿಂದ ಅವರ ವಿರುದ್ಧ ದಾವಾ ಸಲ್ಲಿಸಿದ್ದೇವೆ. ನಮ್ಮ ಅಜ್ಜನ ಹೆಸರು ಗೆದಿಗೆಪ್ಪ ಇರುತ್ತದೆ. ಅವರಿಗೆ ಐದು ಜನ ಮಕ್ಕಳು ಒಬ್ಬ ಹೆಣ್ಣು ಮಗಳು ಇದ್ದರು. 1) ತಿಪ್ಪಣ್ಣ 2) ಚನ್ನಬಸಪ್ಪ 3) ಶಂಕ್ರಪ್ಪ 4) ಫಕ್ಕೀರಪ್ಪ 5) ಬಸಪ್ಪ ಅಂತಾ ಇರುತ್ತಾರೆ. ಬಸಪ್ಪ ಮತ್ತು ಆತನ ಹೆಂಡತಿ ಮೃತರಾಗಿದ್ದು ಅವರಿಗೆ ಯಾರೂ ವಾರಸುದಾರರು ಇರುವುದಿಲ್ಲಾ. ಗದಿಗೆಪ್ಪನ ಮಗಳು ಮೃತಪಟ್ಟಿದ್ದು, ಆಕೆಗೆ ಮಕ್ಕಳು ಇರುವುದಿಲ್ಲ. 50-60 ವರ್ಷಗಳ ಹಿಂದೆ ನಮ್ಮ ಕುಟುಂಬದ ವ್ಯವಹಾರವನ್ನು ತಿಪ್ಪಣ್ಣ ಎನ್ನುವವರು ಮಾಡುತ್ತಿದ್ದರು ಅಂದ್ರೆ ನಿಜ. ತಿಪ್ಪಣ್ಣನಿಗೆ ಚನ್ನವ್ವ ಎನ್ನುವ ಒಬ್ಬಳೇ ಹೆಣ್ಣು ಮಗಳು ಅಂದ್ರೆ ನಿಜ. ನಾನು ನಮ್ಮ ತಂದೆಗೆ ಬಂದ ಸರ್ವೆ ನಂ.4 ಕ್ಕೆ ಸಂಬಧಪಟ್ಟಂತೆ ದಾವಾ ಸಲ್ಲಿಸಿದ್ದೆನೆ. ನಾನು 02 ಎಕರೆ 03 ಗುಂಟೆಗೆ ದಾವಾ ಸಲ್ಲಿಸಿದ್ದೇನೆ. ಅದರ ಪೈಕಿ ದಕ್ಷಿಣದ ಕಡೆಗೆ ಇರುವ 26 ಗುಂಟೆಗೆ ದಾವಾ ಸಲ್ಲಿಸಿದ್ದೇನೆ. ನನಗೆ ದಾವಾ ಆಸ್ತಿಯ ಪೂರ್ವಕ್ಕೆ ಅಜ್ಜಯ್ಯ ಹಿರೇಮಠ ಎನ್ನುವವರ ಜಮೀನು. ಪಶ್ಚಿಮಕ್ಕೆ ಅಡಿವೆಪ್ಪ ಜಿಗಳಿ ಇವರ ಜಮೀನು, ಉತ್ತರಕ್ಕೆ ಸರಕಾರಿ ರಸ್ತೆ, ದಕ್ಷಿಣಕ್ಕೆ ಚಂದ್ರಪ್ಪ ಅರಳೇಶ್ವರ ಇವರ ಜಮೀನು ಬರುತ್ತದೆ. ತಿಪ್ಪಣ್ಣನ ತಮ್ಮ ಚನ್ನಬಸಪ್ಪ 30 ವರ್ಷಗಳ ಹಿಂದೆ ಮೃತಪಟ್ಟಿದ್ದಾನೆ. ಆತನ ಹೆಂಡತಿ ಗಂಗವ್ವ ಮೃತಳಾಗಿದ್ದಾಳೆ. ಅವರಿಗೆ ಮೂರು ಜನ ಹೆಣ್ಣು ಮಕ್ಕಳು ಇದ್ದಾರೆ. ಅವರೇ ಈ ದಾವೆಯ ವಾದಿಯರು ಇದ್ದಾರೆ. ಶಂಕ್ರಪ್ಪನಿಗೆ ಮೂರು ಜನ ಗಂಡು ಮಕ್ಕಳು ಒಬ್ಬಳೇ ಹೆಣ್ಣು ಮಗಳು ಇದ್ದಾಳೆ. ಈ ದಾವೆಯ 2 ಎ ದಿಂದ 2 ಡಿ ಪ್ರತಿವಾದಿಯರು ಇರುತ್ತಾರೆ. ಫಕ್ಕೀರಪ್ಪ ಪೋತಿಯಾಗಿದ್ದು ಆತನಿಗೆ 3 ಬಿ ದಿಂದ 3 ಡಿ ವಾರಸುದಾರರು ಇದ್ದಾರೆ. ದಾವಾ ಆಸ್ತಿಯಲ್ಲಿ ತಿಪ್ಪಣ್ಣನಿಗೆ ಹಿಸ್ಸೆ ಬಂದಿರುವುದಿಲ್ಲಾ. 1) ಚನ್ನಬಸಪ್ಪ

2) ಶಂಕ್ರಪ್ಪ 3) ಫಕ್ಕೀರಪ್ಪ ಎನ್ನುವವರಿಗೆ ದಾವಾ ಆಸ್ತಿಯಲ್ಲಿ ತಿಪ್ಪಣ್ಣನಿಗೆ ಹಿಸ್ಸೆ ಬಂದಿರುತ್ತದೆ. 40 ವರ್ಷಗಳ ಹಿಂದೆ ಗದಿಗೆಪ್ಪನ ಮಕ್ಕಳು ವಿಭಾಗ ಮಾಡಿಕೊಂಡು ಬೇರೆ ಬೇರೆ ವಾಸವಾಗಿದ್ದಾರೆ ಅಂದ್ರೆ ನಿಜ. ದಾವಾ ಆಸ್ತಿಯು ಮೂಲತಃ ಬೂಡಾಸಾಬ್ ಮಹಮದ್ಸಾಬ ಬಾಳೂರ ಇವರ ಆಸ್ತಿ ಅಂದ್ರೆ ನಿಜ. ಸದರಿ ಆಸ್ತಿಯನ್ನು ತಿಪ್ಪಣ್ಣ ಒಬ್ಬನೇ ರೈತಾಪಿ ನಾತೆಯಿಂದ ಸಾಗುವಳಿ ಮಾಡುತ್ತಿದ್ದ ಅಂದ್ರೆ ಸರಿಯಲ್ಲಾ. ನನಗೆ ಓದಲು ಬರೆಯಲು ಬರುವುದಿಲ್ಲಾ. ಗದಿಗೆಪ್ಪ ಮಗ ತಿಪ್ಪಣ್ಣ ದಾವಾ ಆಸ್ತಿಯನ್ನು ಬ್ಬನೇ ರೈತಾಪಿ ನಾತೆಯಿಂದ ಸಾಗುವಳಿ ಮಾಡುತ್ತಿದ್ದ ಅಂದ್ರೆ ನಿಜ. ಸದರಿ ತಿಪ್ಪಣ್ಣನು ದಾವಾ ಆಸ್ತಿಯನ್ನು ರೈತ ನಾತೆಯಿಂದ ಸಾಗುವಳಿ ಮಾಡುತ್ತಿದ್ದು ಅಧಿಭೋಗಧಾರಿಕೆ ಹಕ್ಕನ್ನು ಮಂಜೂರು ಮಾಡುವಂತೆ ಹಾನಗಲ್ ಭೂನ್ಯಾಯ ಮಂಡಳಿಗೆ ಅರ್ಜಿ ಸಲ್ಲಸಿದ್ದ ಅಂದ್ರೆ ನಿಜ. 1981 ರಲ್ಲಿ ದಾವಾ ಆಸ್ತಿಯನ್ನು ತಿಪ್ಪಣ್ಣ ಹೆಸರಿಗೆ ಅಧಿಭೋಗಧಾರಿಕೆ ಹಕ್ಕನ್ನು ಮಂಜೂರು ಮಾಡಿದ್ದಾರೆ ಅಂದ್ರೆ ನಿಜ. ತಿಪ್ಪಣ್ಣನಿಗೆ ಸದರಿ ದಾವಾ ಆಸ್ತಿಯ ಕುರಿತು ತಹಶೀಲ್ದಾರ್ ಫಾರಂ ನಂ.10 ನೀಡಿದ್ದಾರೆ ಅಂದ್ರೆ ನಿಜ. ಆದರೆ ಆತನು ದಾವಾ ಆಸ್ತಿಯನ್ನು ಸಾಗುವಳಿ ಮಾಡುತ್ತಿರಲಿಲ್ಲ, ನಾವೇ ಸಾಗುವಳಿ ಮಾಡುತ್ತಿದ್ದೆವು ಅನ್ನುತ್ತಾರೆ. ತಿಪ್ಪಣ್ಣ ಯಾವಾಗ ಮೃತಪಟ್ಟಿದ್ದಾರೆ ಅಂತಾ ಹೇಳಲಾಗುವುದಿಲ್ಲಾ. ಆತನ ಹೆಂಡತಿ ತಿಪ್ಪಣ್ಣನಿಗಿಂತ ಮೊದಲೇ ಮೃತಪಟ್ಟಿದ್ದಳು. ತಿಪ್ಪಣ್ಣನ ಮರಣಾ ನಂತರ ಆತನ ಒಬ್ಬಳೇ ಮಗಳು ಚನ್ನವ್ವ ಮನೆತನದ ಹಿರಿಯತನ ಮಾಡುತ್ತಾ ಬಂದಿದ್ದಾಳೆ ಅಂದ್ರೆ ನಿಜ. ನಾನು ದಾವಾ ಆಸ್ತಿಯ ಉತಾರವನ್ನು ನೋಡಿದ್ದೇನೆ. ಡ. ಉತಾರದಲ್ಲಿ ನನ್ನ ತಂದೆಯ ಹೆಸರು ಇದೆ ಅಂತಾ ಸ್ವ-ಇಚ್ಚೆಯಿಂದ ಹೇಳುತ್ತಾರೆ. ಪಹಣಿ ಪತ್ರಿಕೆಯಲ್ಲಿ ನನ್ನ ತಂದೆಯ ಹೆಸರು ಇದೆ. ಅದನ್ನು ಕಡೆಯದಾಗಿ ಇಟ್ಟಿದ್ದಾರೆ. ಚಾಲ್ತಿ ಉತಾರದಲ್ಲಿ ನನ್ನ ತಂದೆಯ ಹೆಸರು ನಮೂದಿಲ್ಲಾ ಅಂದ್ರೆ ಸಾಕ್ಷಿಯು ನಮ್ಮ ತಂದೆಯ ಹೆಸರಿನಲ್ಲಿ ಉತಾರ ಬರುವಂತೆ ಕೇಳಿ ಈ ದಾವಾ ಸಲ್ಲಿಸಿದ್ದೇನೆ ಅನ್ನುತ್ತಾರೆ. ನಮ್ಮ ತಂದೆಯ ಹೆಸರಿನಲ್ಲಿ ಇದ್ದ ಡ. ನಂಬರಿನ ಉತಾರಗಳನ್ನು ನ್ಯಾಯಾಲಯದ ಮುಂದೆ ಹಾಜರು

ಮಾಡಿದ್ದೇನೆ. ನಿಪಿ–5 ರಲ್ಲಿ ನಮ್ಮ ತಂದೆ ಚನ್ನಬಸಪ್ಪನ ಹಿಸ್ಸೆಗೆ ಸಾಮೂಹಿಕವಾಗಿ ¼ ಆಂಶ ಹಿಸ್ಸೆ ಅಂತಾ ನಮೂದು ಮಾಡಿದ್ದಾರೆ ಅಂದ್ರೆ ನನಗೆ ಗೊತ್ತಾಗುವುದಿಲ್ಲಾ. ನಿಪಿ–5 ರಲ್ಲಿ ದಾವಾ ಆಸ್ತಿಯ 26 ಗುಂಟೆಗೆ ಲಾವಣಿ ಅಂತಾ ಬರೆದಿದ್ದು, ಜಮೀನದಲ್ಲಿ ಬೆಳೆದ ಅರ್ಧ ಬೆಳೆಯನ್ನು ಮಾಲಕರಿಗೆ ಕೊಡಬೇಕೆಂದು ಆ ರೀತಿ ಬರೆದಿರುತ್ತಾರೆ ಅನ್ನುತ್ತಾರೆ. ನಿಪಿ–5 ರ ಬಗ್ಗೆ 1980 ರಲ್ಲಿ ನನಗೆ ಮಾಹಿತಿ ಇರಲಿಲ್ಲ. ನನಗೆ ನಿಪಿ–5 ರಲ್ಲಿ ಯಾರಿಗೆ ಎಷ್ಟು ಜಮೀನು ಬಂದಿದೆ ಅಂತಾ ಮಾಹಿತಿ ಇರುವುದಿಲ್ಲಾ ಅಂದ್ರೆ ಸರಿಯಲ್ಲ. ತಿಪ್ಪಣ್ಣನಿಗೆ ಒಂದು ಕಡೆಗೆ 01 ಎಕರೆ ಇನ್ನೊಂದು ಕಡೆಗೆ 01 ಎಕರೆ 09 ಗುಂಟೆ ಬಂದಿದೆ, ನನಗೆ ಅದರ ಸರ್ವೆ ನಂಬರು ಗೊತ್ತಿಲ್ಲ. ನಿಪಿ–5 ಮಂಜೂರಾಗುವ ಕಾಲಕ್ಕೆ ತಿಪ್ಪಣ್ಣ ಜೀವಂತವಾಗಿದ್ದನು. ಫಕ್ಕೀರಪ್ಪನಿಗೆ ನಾಲ್ಕೂವರೆ ಎಕರೆ ಜಮೀನು ಬಂದಿದೆ. ಶಂಕ್ರಪ್ಪ ಎನ್ನುವವರಿಗೆ ನಾಲ್ಕೂವರೆ ಎಕರೆ ಜಮೀನು ಬಂದಿದೆ ಅದರ ಸರ್ವೆ ನಂಬರು ಹೇಳಲು ಬರುವುದಿಲ್ಲಾ. ನಮ್ಮ ತಂದೆಗೆ 01 ಎಕರೆ ಮತ್ತು ದಾವಾ ಆಸ್ತಿಯಲ್ಲಿ 26 ಗುಂಟೆ ಜಮೀನು ಕೊಟ್ಟಿದ್ದಾರೆ. ಸರ್ವೆ ನಂ.2 ರಲ್ಲಿ 01 ಎಕರೆ ಜಮೀನು ಕೊಟ್ಟಿದ್ದಾರೆ. ಮೇಲೆ ಹೇಳಿದಂತೆ ಭಾಗ ಮಾಡಿ ಕೊಟ್ಟಿದ್ದಾರೆ. ನಾನು ವರದಿಯನ್ನು ನೋಡಿರುವುದಿಲ್ಲ. ನನಗೆ ಓದು ಬರಹ ಬರುವುದಿಲ್ಲ ಆದ್ದರಿಂದ ನನಗೆ ಗೊತ್ತಾಗುವುದಿಲ್ಲಾ. ನಮ್ಮ ತಂದೆ 35 ವರ್ಷಗಳ ಹಿಂದೆ ಮೃತರಾಗಿದ್ದಾರೆ. ನಮ್ಮ ತಂದೆ ಮೃತರಾದ ನಂತರ ನಮ್ಮ ತಂದೆಯ ಹೆಸರಿನಲ್ಲಿ ಇರುವ ಆಸ್ತಿಯ ದಾಖಲೆಗಳನ್ನು ನೋಡಿರುವುದಿಲ್ಲಾ. ನಾನು ಅನಕ್ಷರಸ್ಥಳಿದ್ದೇನೆ. ನಮ್ಮ ತಂದೆ ಮೃತರಾದ ನಂತರ ನಮ್ಮ ತಂದೆಯ ಹೆಸರಿನಲ್ಲಿ ಇರುವ ಆಸ್ತಿಗಳನ್ನು ನಮ್ಮ ಹೆಸರಿಗೆ ಮಾಡಿಸಿಕೊಂಡಿರುವುದಿಲ್ಲಾ. 1 ನೇ ಪ್ರತಿವಾದಿ 20 ವರ್ಷಗಳ ಹಿಂದೆ ದಾವಾ ಆಸ್ತಿ ನಮಗೆ ಸೇರಿದ್ದು ಎಂದು ಜಗಳ ಮಾಡಿದಾಗ ನನಗೆ ಗೊತ್ತಾಗಿದೆ. ನಾನು ಆಗ ದಾವಾ ಸಲ್ಲಿಸಿದ್ದೇನೆ. 20 ವರ್ಷಗಳ ಹಿಂದೆಯೇ ದಾವಾ ಸಲ್ಲಿಸಿದ್ದೇನೆ. ಯಾರ ವಿರುದ್ಧ ಏನು ಮಾಗಣಿ ಮಾಡಿ ದಾವಾ ಸಲ್ಲಿಸಿದ್ದೇನೆ ನನಗೀಗ ನೆನಪಿಲ್ಲಾ. 26 ಗುಂಟೆ ಜಮೀನಿನ ಪೈಕಿ 08

ಗುಂಟೆಗೆ ಶಾಲೆಗೆ ಹೋಗಿದೆ ಅಂದ್ರೆ ಸರಿಯಲ್ಲಾ. ರಸ್ತೆಗೆ 04 ಗುಂಟೆ ಜಮೀನು ಹೋಗಿದೆ ಅಂದ್ರೆ ಸರಿಯಲ್ಲಾ. 03 ಗುಂಟೆ ಹೋಗಿದೆ ಅನ್ನುತ್ತಾರೆ. ಶಾಲೆ ಇರುವ ಕಟ್ಟಡಕ್ಕೆ ಸುರಳೇಶ್ವರ ಗ್ರಾಮ ಪಂಚಾಯತಿ ಹದ್ದಿಯ ಕುಂಟನಹೊಳ್ಳಿ ಗ್ರಾಮದ ವಿಪಿಸಿ ನಂ.66 ಅಂತಾ ನಂಬರನ್ನು ಕೊಟ್ಟಿದ್ದಾರೆ ಅಂದ್ರೆ ನಿಜ. ನಾನು ಶಾಲೆಯವರನ್ನು ಮತ್ತು ಸರಕಾರವನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲಾ ಅಂದ್ರೆ ಸಾಕ್ಷಿಯು ದಾವಾ ಆಸ್ತಿಯಲ್ಲಿ ಶಾಲೆ ಮತ್ತು ರಸ್ತೆ ಗೆ ಹೋಗಿರುವುದಿಲ್ಲ, ಆದ್ದರಿಂದ ನಾನು ಶಾಲೆಯವರನ್ನು ಮತ್ತು ಸರಕಾರವನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲಾ ಅನ್ನುತ್ತಾರೆ. ಪಹಣಿ ಪತ್ರಿಕೆಯಲ್ಲಿ ರಸ್ತೆ ಮತ್ತು ಶಾಲೆಗೆ ಹೋದ ಜಮೀನಿನ ಬಗ್ಗೆ ನಮೂದಾಗಿರುವುದಿಲ್ಲಾ ಅಂದ್ರೆ ಸರಿಯಲ್ಲಾ. ಫಕ್ಕೀರಪ್ಪನಿಗೆ ಬಂದ ಜಮೀನಿನಲ್ಲಿ ಶಾಲೆಗೆ ಮತ್ತು ರಸ್ತೆಗೆ ಜಾಗೆ ಹೋಗಿದೆ. ದಾವಾ ಸರ್ವೆ ನಂಬರಿನಲ್ಲಿ 1ನೇ ಪ್ರತಿವಾದಿಯ ವಾರಸುದಾರರ ಹೆಸರಿನಲ್ಲಿ 38 ಗುಂಟೆ ಜಮೀನು ಇದೆ ಅಂತಾ ನಮೂದಾಗಿದೆ ಅಂದ್ರೆ ಸರಿಯಲ್ಲ. ಅವರು ಇತ್ತೀಚಿಗೆ ಮಾಡಿಸಿಕೊಂಡಿದ್ದಾರೆ ಅನ್ನುತ್ತಾರೆ. 10−12 ವರ್ಷಗಳ ಹಿಂದೆ 1ನೇ ಪ್ರತಿವಾದಿಯ ವಾರಸುದಾರರು ತಮ್ಮ ಹೆಸರುಗಳನ್ನು ಕಂದಾಯ ದಾಖಲೆಗಳಲ್ಲಿ ಕೂಡಿಸಿಕೊಂಡಿದ್ದಾರೆ ಅನ್ನುತ್ತಾರೆ. 1ನೇ ಪ್ರತಿವಾದಿಯ ಹೆಸರು ನಮೂದಾಗುವ ಮೊದಲು ಅವರ ತಂದೆ ತಿಪ್ಪಣ್ಣ ನ ಹೆಸರು ನಮೂದಾಗಿತ್ತು ಅಂದ್ರೆನಿಜ. ತಿಪ್ಪಣ್ಣನ ಹೆಸರು ನಮೂದಾದ ಬಗ್ಗೆ ನಾನು 20 ವರ್ಷಗಳಿಂದ ನೋಡುತ್ತಾ ಬಂದಿದ್ದೇನೆ ಅಂದೆ ನಿಜ. ನಾನು ಆ ಬಗ್ಗೆ ಯಾವುದೇ ಕಾನೂನು ಕ್ರಮ ಜರುಗಿಸಿರುವುದಿಲ್ಲಾ. ಆ ಬಗ್ಗೆ ಕಾನೂನು ಕ್ರಮ ಜರುಗಿಸಲು ತೊಂದರೆ ಇತ್ತಾ ಅಂದ್ರೆ ನಾನು ತಹಶೀಲ್ದಾರ್ ಅವರಿಗೆ ತಕರಾರು ಅರ್ಜಿ ಸಲ್ಲಿಸಿದ್ದೆನು. 13−14 ವರ್ಷಗಳ ಹಿಂದೆಯೇ ತಕರಾರು ಅರ್ಜಿ ಸಲ್ಲಿಸಿದ್ದೆನು. ತಹಶೀಲ್ದಾರ್ ಕಚೇರಿಯಲ್ಲಿ ತಕರಾರು ಅರ್ಜಿ ಸಲ್ಲಿಸಿದಾಗ ಪ್ರಕರಣ ನಡೆಸುತ್ತಾರೆ ಅಂದ್ರೆ ನನಗೆ ಗೊತ್ತಿಲ್ಲ. ನನ್ನ ಪ್ರಕರಣ ನಡೆಸಿಲ್ಲಾ ಅನ್ನುತ್ತಾರೆ.

1 ನೇ ಪ್ರತಿವಾದಿ ಮೃತಪಟ್ಟ ನಂತರ ಅವರ ವಾರಸುದಾರರ ಹೆಸರು ನಮೂದಾಗಿರುವುದನ್ನು ರದ್ದುಪಡಿಸಲು ನಾನು ನ್ಯಾಯಾಲಯಕ್ಕೆ ದಾವಾ ಸಲ್ಲಿಸಿದೇನೆ. ನಾನು ಸದರಿ ಕಂದಾಯ ದಾಖಲೆಗಳನ್ನು ತಹಶೀಲ್ದಾರ್ ಅಥವಾ ವಿಭಾಗಾಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿಲ್ಲಾ. ಆ ರೀತಿ ಮೇಲ್ಮನವಿ ಸಲ್ಲಿಸಲು ಯಾವುದೇ ತೊಂದರೆ ಇರಲಿಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ